# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿ ರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com


ದಿನಾಂಕ: 16.04.2016

## ಪ್ರಕಟಣೆ ಕೃಪೆಗಾಗಿ

## ಗದ್ದಿಗೆಯಲ್ಲಿ ಯಶಸ್ವಿಯಾಗಿ ನಡೆದ ಆರೋಗ್ಯ ತಪಾಸಣಾ ಶಿಬಿರ

ಏಪ್ರಿಲ್-16 ಮೈಸೂರು ನಗರದ ಬಿಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ವತಿಯಿಂದ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮ ಶತಮಾನೋತ್ಸವ ಮತ್ತು ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ 16.04.2016 ರಂದು ಹುಣಸೂರು ತಾಲ್ಲೂಕಿನ ಶ್ರೀ ಕೆಂಡಗಣ್ಣೇಶ್ವರ ಸ್ವಾಮಿ ಗದ್ದಿಗೆ ಆವರಣದಲ್ಲಿ ಬೃಹತ್ ಉಚಿತ ಆರೋಗ್ಯ ಮತ್ತು ಕಣ್ಣಿನ ಪೊರೆ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. 200 ಕ್ಕೂ ಹೆಚ್ಚಿನ ರೋಗಿಗಳು ತಪಾಸಣೆಗೆ ಒಳಪಟ್ಟು ಶಿಬಿರದ ಲಾಭ ಪಡೆದರು. ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ, ಸಮುದಾಯ ಚಿಕಿತ್ಸಾ ವಿಭಾಗ, ಜೆಎಸ್‌ಎಸ್ ಆಸ್ಪತ್ರೆ, ಶ್ರೀ ಕೆಂಡಗಣ್ಣೇಶ್ವರ ಸ್ವಾಮಿ ಮತ್ತು ಶ್ರೀ ಮಹದೇಶ್ವರ ಸ್ವಾಮಿ ಸೇವಾ ಟ್ರಸ್ಟ್(ರಿ) ಇವರ ಸಹಯೋಗದಲ್ಲಿ ನಡೆದ ಶಿಬಿರದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ, ಮೂಳೆರೋಗ, ಮಧುಮೇಹ, ರಕ್ತದ ಒತ್ತಡ, ಚರ್ಮರೋಗ, ಕಿವಿ ಮೂಗು ಗಂಟಲು, ಮಕ್ಕಳ ಖಾಯಿಲೆ, ಕಣ್ಣಿನ ಪೊರೆ ಇತ್ಯಾದಿ ಖಾಯಿಲೆಗಳ ತಪಾಸಣೆ ಮಾಡಿ ಅಗತ್ಯವಿದ್ದ ರೋಗಿಗಳಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಿ ಸೂಕ್ತ ವೈದ್ಯಕೀಯ ಸಲಹೆಗಳನ್ನು ನೀಡಲಾಯಿತು.

ಶಿಬಿರದಲ್ಲಿ ಜೆಎಸ್‌ಎಸ್ ಸಮುದಾಯ ಚಿಕಿತ್ಸಾ ವಿಭಾಗದ ಡಾ. ಪ್ರವೀಣ್ ಕುಲಕರ್ಣಿ, ಡಾ. ನಾಗೇಂದ್ರ, ಡಾ. ಟಿ ಎಸ್ ಪ್ರದೀಪ್, ಡಾ. ಸವಿತಾರಾಣಿ ಹಾಗೂ ಜೆಎಸ್‌ಎಸ್ ಆಸ್ಪತ್ರೆಯ ಡಾ. ರಾಘವೇಂದ್ರ, ಡಾ. ಅಂಕುಷ್, ಡಾ. ಪ್ರಸನ್ನಕುಮಾರ್, ಡಾ. ಸೂರ್ಯ ಪ್ರಮೋದ್, ಡಾ. ಪೂಜಾ. ಡಾ. ಸೀಮಾ, ಸಂಚಾಲಕರಾದ ಡಾ. ಶಾಲಿ, ಡಾ. ಸುಮತಿ, ಡಾ. ನಾಗೇಂದ್ರಪ್ರಸಾದ್‌ರವರು, ಮತ್ತು ಕಾಲೇಜಿನ ಪ್ರಾಚಾರ್ಯರಾದ ಪ್ರೊ ಎಂ ಮಹಾದೇವಪ್ಪ, ಶೈಕ್ಷಣಿಕ ಡೀನ್ ಡಾ. ಕೆ ವಿ ಸುರೇಶ, ಸುವರ್ಣ ಮಹೋತ್ಸವ ಸಮಿತಿ ಕಾರ್ಯದರ್ಶಿ ಪ್ರೊ ಡಿ ಎಸ್ ಸದಾಶಿವಮೂರ್ತಿ, ಶಿಬಿರ ಸಂಚಾಲಕರಾದ ಡಾ. ಎಂ ಪಿ ಸೋಮಶೇಖರ್, ಡಾ ಬಿ ಕೆ ಕೆಂಡಗಣ್ಣಸ್ವಾಮಿ ಹಾಗೂ ಸಮಾಜಸೇವಾ ವಿಭಾಗದ ಪ್ರಾಧ್ಯಾಪಕರುಗಳಾದ ಡಾ. ಕುಮುದಿನಿ ಅಚ್ಚಿ, ಶ್ರೀಮತಿ ಸುಸ್ಮಿತ ಮತ್ತು ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಪ್ರಾಂಶುಪಾಲರು

(ಪ್ರೊ ಎಂ ಮಹದೇವಪ್ಪ)

ಪ್ರಾಚಾರ್ಯರು

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಸ್ವಾಯತ್ತ)

ಊಟಿ ರಸ್ತೆ, ಮೈಸೂರು-570 025.

ಗೆ

ಸಂಪಾದಕರು

---------------

---------------

ಮೈಸೂರು